ವಿಚಾರಧಾರೆಯ ಚೌಕಟ್ಟು ಇದ್ದಿದ್ದರೆ ಅದಕ್ಕೆ ತಕ್ಕ ವಾದಸರಣಿಯನ್ನು ಒದಗಿಸಲು ಸಾಧ್ಯವಾಗುತ್ತಿತ್ತು. ಆ ಬಂಧನದಿಂದಲೂ ಗೀತಾ ಮುಕ್ತರಾಗಿಬಿಡುತ್ತಾರೆ.

ಗೀತಾ ತಮ್ಮ ಜೀವನಗಾಥೆಯ ಮೂಲಕ ಸಮಸ್ಯೆಗಳನ್ನು ಅವುಗಳ ಮೂಲಸ್ವರೂಪದಲ್ಲಿ ಪರೀಕ್ಷಿಸಿನೋಡಲು ಪ್ರೇರೇಪಿಸುತ್ತಾರೆ. ಆ ಪರಿಸ್ಥಿತಿಗನುಗುಣವಾಗಿ ಪ್ರತಿಕ್ರಿಯಿಸಿ ಅದಕ್ಕೊಂದು ಸಮಾಧಾನವನ್ನು ಕಲ್ಪಿಸುವುದನ್ನು ನಿರೂಪಿಸಿ ತೋರಿಸುತ್ತಾರೆ. ನಾವು ಹಚ್ಚಿಕೊಂಡಿರುವ ಪ್ರೋತ್ಸಾಹಕ–ದಂಡಾತ್ಮಕ ಚೌಕಟ್ಟು, ವಿಚಾರಧಾರೆಯ ಚೌಕಟ್ಟುಗಳು ತಕ್ಷಣದ, ಸಾವು–ಬದುಕಿನ ಸವಾಲುಗಳನ್ನು ಅಸ್ತಿತ್ವದ ಸವಾಲುಗಳನ್ನು ಎದುರಿಸಲು ಅಸಮರ್ಥವಾಗಿವೆ ಎನ್ನುವುದನ್ನು ತೋರಿಸುತ್ತಾರೆ. ಪ್ರತಿ ಸಂದರ್ಭವೂ ತರ್ಕಬದ್ಧವಾಗಿಯೇ ಇರಬೇಕೆಂದೇನೂ ಇಲ್ಲ. ಜೊತೆಗೆ ದೀರ್ಘಕಾಲದ ಮೂಲಭೂತ ಬದಲಾವಣೆಗಳಿಗೂ ಸದ್ಯದ ಅಸ್ತಿತ್ವದ ಸವಾಲುಗಳ ತರ್ಕಕ್ಕೂ ಇರುವ ಘರ್ಷಣೆಯನ್ನು ನಿಭಾಯಿಸಬೇಕಾದ ಅನಿವಾರ್ಯತೆಯನ್ನು ಅವರು ಎತ್ತಿ ತೋರಿಸುತ್ತಾರೆ. ವಿಮಾನಯಾನ ಮಾಡುವಾಗ ಗಗನಸಖಿಯರು ಕೊಡುವ ನಿರ್ದೇಶನದ ಮಾತು ಇಲ್ಲಿ ನಮ್ಮ ಕಿವಿಯಲ್ಲಿ ರಿಂಗಣಿಸಬಹುದು: 'ಇತರರಿಗೆ ಸಹಾಯ ಮಾಡುವ ಮುನ್ನ ಮೊದಲಿಗೆ ನಿಮ್ಮ ಆಮ್ಲಜನಕದ ಮಾಸ್ಕುಗಳನ್ನು ಧರಿಸಿ' – ದೀರ್ಘಕಾಲದ ಉಳಿವಿಗೆ, ಸದ್ಯದ ಸಂದರ್ಭದಲ್ಲಿ ಬದುಕುಳಿಯುವುದೂ ಅತ್ಯವಶ್ಯಕ. ಸ್ವಾರ್ಥ ಎನ್ನಿಸುವ ಈ ಕೆಲಸದಲ್ಲಿಯೇ ಪರಮಾರ್ಥವೂ ಇದೆ.

ಈಚಿನ ಸಮಯದಲ್ಲಿ ಬಂದ ಮುಖ್ಯ ಪುಸ್ತಕಗಳಲ್ಲಿ ಗೀತಾ ಅವರ ನೆನಪುಗಳ ಕಥನವೂ ಒಂದು. ಇದು ಯಾವ ಸಿದ್ಧ ಚೌಕಟ್ಟುಗಳನ್ನೂ ಆಶ್ರಯಿಸದೇ ಭಿನ್ನ ರೀತಿಯ ಸಾಧ್ಯತೆಗಳನ್ನು ತೋರಿಸುತ್ತದೆ ಎನ್ನುವುದು ಅದರ ಪ್ರಾಮುಖ್ಯತೆಗೆ ಒಂದು ಕಾರಣವಾದರೆ, ಸಣ್ಣ ಹಣೆಪಟ್ಟಿಗಳ ಪೆಟ್ಟಿಗೆಯಲ್ಲಿ ಬಂಧಿಸಿಡುವ ಜಾಯಮಾನಕ್ಕೂ ಒಂದು ಸವಾಲನ್ನೊಡ್ಡುತ್ತದೆ. ಎಲ್ಲದರಲ್ಲೂ ಇರುವ ಸೂಕ್ಷ್ಮ ಭಿನ್ನತೆಗಳನ್ನು ಈ ಪುಸ್ತಕ ಎತ್ತಿ ತೋರಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ದಲಿತ–ಶೋಷಿತ ವರ್ಗಗಳ ಜೊತೆ ಕೆಲಸಮಾಡಬೇಕಾದರೆ ಅವರ ಸಮಸ್ಯೆಗಳನ್ನು – ಆತಂಕ ಅಸಹಾಯಕತೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅವರಲ್ಲೇ ಒಬ್ಬರಾಗಿ ಬದುಕುವುದು ಎಷ್ಟು ಅವಶ್ಯಕ ಎನ್ನುವುದನ್ನು ಅವರು ತೋರಿಸಿಕೊಡುತ್ತಾರೆ. ಜನ ತಮ್ಮ ಮನೆ, ಅಡುಗೆಮನೆ, ಊಟ ಮತ್ತು ಜೀವನ ಶೈಲಿಯನ್ನು ಹಂಚಿಕೊಳ್ಳಲು ತಯಾರಾದಾಗಲೇ ಅವರ ಸಮಸ್ಯೆಗಳ ಸೂಕ್ಷ್ಮಗಳು ಅರ್ಥವಾಗುತ್ತದೆ ಎನ್ನುವುದು ಗೀತಾರ ಜೀವನದಿಂದ ನಮಗೆ ವೇದ್ಯವಾಗುತ್ತದೆ. ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ಒಬ್ಬ ಮಹಿಳೆ ಗಾಜಿಯಾಬಾದಿನ ಸಫಾಯಿಕರ್ಮಚಾರಿಗಳಾದ



ಗೀತಾ ರಾಮಸ್ವಾಮಿ

ವಾಲ್ಮೀಕಿ ಸಮುದಾಯದ ನಡುವೆಯಿದ್ದು, ಅವರು ಬಡಿಸಿದ ಹಂದಿ ಮಾಂಸವನ್ನು ಸಹಜವಾಗಿ ಸ್ವೀಕರಿಸುವ ಯಾತ್ರೆ ಸರಳವಾದದ್ದೇನೂ ಅಲ್ಲ. ಆ ಸೀಮೋಲ್ಲಂಘನದಲ್ಲಿಯೇ ಅವರ ಯಾತ್ರೆಯ ಯಶಸ್ಸು ಅಡಗಿದೆ. ಆದರೆ, ನಮ್ಮ ಮುಂದಿರುವ ಸಮಸ್ಯೆಗಳಲ್ಲಿ – ಶ್ರೀಮಂತ ಪಟ್ಟಭದ್ರ ಹಿತಾಸಕ್ತಿಗಳ ನಡುವೆ, ಈ ದೀರ್ಘ ಹೋರಾಟದ ವಿಜಯವೂ ಎಷ್ಟು ಗೌಣವಾಗಿ ಕಾಣಬಹುದು ಎನ್ನುವುದರಲ್ಲಿಯೇ ಈ ಅಸಮಾನತೆಯ ಸಮಸ್ಯೆಯ ಬೃಹತ್ ಗಾತ್ರ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಹೀಗಾಗಿಯೇ ಈ ಪುಸ್ತಕ ನಮ್ಮ ಕಣ್ಣು ತೆರೆಸುತ್ತದೆ. ಆದರೆ, ಸಂಭ್ರಮಿಸಲು ಪ್ರೇರೇಪಿಸುವುದಿಲ್ಲ. ●